ಎಂ.ವಿ.ಸಿ. ನಂ. 1376/2022 ಪಿ.ಡಬ್ಲ್ಯೂ- 1

**ಸಾಕ್ಷಿಯನ್ನು ದಿನಾಂಕ 21.7.2023 ರಂದು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.**

ಪಾಟೀ ಸವಾಲುಃ 1 ರಿಂದ 3 ನೇ ಎದುರುದಾರ ಪರ ಶ್ರೀ ಎ.ಜಿ.ಪಿ ರವರಿಂದಃ

ನಾನು 3 ನೇ ತರಗತಿವರೆಗೆ ಓದಿರುತ್ತೇನೆ. ಅಪಘಾತವಾದ ದಿನ ನನಗೆ ದ್ವಿಚಕ್ರ ವಾಹನದ ಚಾಲನ ಪರವಾನಗಿ ಇತ್ತು. ನನಗೆ ಸಂಬಂಧಪಟ್ಟ ಕೆಎ 45 ಇಬಿ5504 ದ್ವಿಚಕ್ರ ವಾಹನಕ್ಕೆ ವಿಮೆ ಚಾಲ್ತಿಯಲ್ಲಿತ್ತು. ನನಗೆ ಸಂಬಂಧಪಟ್ಟ ಚಾಲನ ಪರವಾನಗಿ ಪತ್ರ ಮತ್ತು ವಿಮಾ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಾನು ವ್ಯವಸಾಯದ ಜೊತೆ ಗಾರೆ ಕೆಲಸವನ್ನು ಮಾಡುತ್ತೇನೆ. ನನಗೆ ಬಡಗಲಪುರ ಗ್ರಾಮದಲ್ಲಿ 4 ಎಕರೆ ಜಮೀನು ಇರುತ್ತದೆ. ನನಗೆ ತಿಂಗಳಿಗೆ 18 ಸಾವಿರ ಆದಾಯ ಇದ್ದ ಬಗ್ಗೆ ದಾಖಲಾತಿಯನ್ನು ನ್ಯಾಯಲಯಕ್ಕೆ ಹಾಜರುಪಡಿಸಿರುತ್ತೇನೆ. ಯಾವ ದಾಖಲೆಯನ್ನು ಹಾಜರುಪಡಿಸಿರುತ್ತೀರಿ ಎಂದರೆ ಸಾಕ್ಷಿದಾರರು ವ್ಯವಸಾಯ ಮಾಡುತ್ತಿರುವ ದಾಖಲೆಯನ್ನು ನೀಡಿರುತ್ತೇನೆ ಎನ್ನುವರು. ಗಾರೆ ಕೆಲಸದವರು ಕಾರ್ಮಿಕ ಇಲಾಖೆಯ ದೃಢೀಕರಣ ಪತ್ರವನ್ನು ಪಡೆಯುತ್ತಾರೆ ಎಂದರೆ ಸರಿ. ನಾನು ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸಾಕ್ಷಿದಾರರಿಗೆ ಅವರು ಹಾಜರುಪಡಿಸಿರುವ ದಾಖಲಾತಿಯನ್ನು ತೋರಿಸಿ ಯಾವ ದಾಖಲೆ ಕಾರ್ಮಿಕ ಇಲಾಖೆಯ ದೃಢೀಕರಣ ಪತ್ರ ಎಂದರೆ ಸಾಕ್ಷಿದಾರರು ನನಗೆ ಓದಲು ಬರುವುದಿಲ್ಲ ಎನ್ನುವರು. ನನ್ನ ಊರಿನ ರಸ್ತೆಯಿಂದ ಹೆಡಿಯಾಲ ಮುಖ್ಯ ರಸ್ತೆಗೆ ಹೋಗಬೇಕಾದರೆ ಹೆಡಿಯಾಲ ಕಡೆಯಿಂದ 100 ಮೀಟರ್ ದೂರದಲ್ಲಿ ಎರಡು ತಿರುವುಗಳು ಇರುತ್ತದೆ ಎಂದರೆ ಸರಿ. ದ್ವಿಚಕ್ರ ವಾಹನ ಮತ್ತು 4 ಚಕ್ರದ ವಾಹನಗಳು ಸದರಿ ತಿರುವಿನಲ್ಲಿ ನಿಧಾನವಾಗಿ ಹೋಗಲೇಬೇಕು ಎಂದರೆ ಸರಿ. ಎದುರುದಾರರಿಗೆ ಸಂಬಂಧಪಟ್ಟ ವಾಹನವನ್ನು ಅವರು ನಿಧಾನವಾಗಿ ಎಡಬದಿಯಲ್ಲಿ ಚಲಾಯಿಸುತ್ತಿದ್ದರು ಎಂದರೆ ಸರಿಯಲ್ಲ. ನಾನು ಅತಿವೇಗ ಮತ್ತು ಅಜಾಗರೂಕತೆಯಿಂದ ಒಡೆಯನಪುರ ಕಡೆಯಿಂದ ನನ್ನ ವಾಹನವನ್ನು ಚಲಾಯಿಸಿಕೊಂಡು ಬಂದು ಎಡಬದಿಯಲ್ಲಿ ಹೋಗುತ್ತಿದ್ದ ವಾಹನಕ್ಕೆ ಡಿಕ್ಕಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಅರಣ್ಯ ಇಲಾಖೆಯವರು ಆಸ್ಪತ್ರೆ ಖರ್ಚಿಗೆ ರೂ. 6 ಲಕ್ಷವನ್ನು ಕೊಟ್ಟಿರುತ್ತಾರೆ ಎಂದರೆ ಸಾಕ್ಷಿದಾರರು ರೂ. 2 ಲಕ್ಷ ನೀಡಿರುತ್ತಾರೆ ಎನ್ನುವರು. ಅರಣ್ಯ ಇಲಾಖೆಯವರು ಚೆಕ್ ಮೂಲಕ ಆಸ್ಪತ್ರೆ ಖರ್ಚಿಗೆ ರೂ. 6 ಲಕ್ಷ ನೀಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಆಸ್ಪತ್ರೆಯಿಂದ ಡಿಸ್‌ಚಾರ್ಜ ಆದ ನಿಖರವಾದ ದಿನಾಂಕವನ್ನು ಹೇಳಲಾಗುವುದಿಲ್ಲ. ನಾನು 11 ದಿನಗಳ ಕಾಲ ಆಸ್ಪತ್ರೆಯಲ್ಲಿ ಒಳರೋಗಿಯಾಗಿದ್ದೆ. ನಾನು ನನ್ನ ಅರ್ಜಿಯಲ್ಲಿ ಆಸ್ಪತ್ರೆ ಖರ್ಚಿಗೆ 8 ಲಕ್ಷ ಆಗಿರುತ್ತದೆ ಎಂದು ನಮೂದಿಸಿದ್ದು, ಆದರೆ ನಾನು ಹಾಜರುಪಡಿಸಿರುವ ಬಿಲ್ಲುಗಳ ಒಟ್ಟು ಮೊತ್ತ ಅದಕ್ಕಿಂತ ಜಾಸ್ತಿಯಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಾನು ಡಿಸ್‌ಚಾರ್ಜ ಆದ ನಂತರ ಯಾವ ದಿನಾಂಕದಂದು ವೈದ್ಯರನ್ನು ಭೇಟಿಯಾಗಿರುತ್ತೇನೆ ಎಂದು ನಿಖರವಾಗಿ ಹೇಳಲಾಗುವುದಿಲ್ಲ. ವೈದ್ಯರು ನೀಡಿದ ಔಷದಿ ಚೀಟಿಗೆ ಅನುಗುಣವಾಗಿ ಔಷದಿ

ಖರೀದಿಸಿರುವ ಬಗ್ಗೆ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಮೈಸೂರಿನಲ್ಲಿ ಅಪೋಲೋ ಆಸ್ಪತ್ರೆಗಿಂತ ಹೆಚ್ಚಿನ ಸೌಕರ್ಯವಿರುವ ಕೆ.ಆರ್.ಆಸ್ಪತ್ರೆ, ಜೆ.ಎಸ್.ಎಸ್. ಆಸ್ಪತ್ರೆ, ಮಿಷನ್ ಆಸ್ಪತ್ರೆ ಇರುತ್ತದೆ ಎಂದರೆ ಸಾಕ್ಷಿದಾರರು ನನಗೆ ಜ್ಞಾನ ತಪ್ಪಿದ್ದರಿಂದ ಯಾವುದೋ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಸೇರಿಸಿರುತ್ತಾರೆ ಎನ್ನುವರು. ನಾನು ಅರ್ಜಿಯಲ್ಲಿ ಕೇಳಿರುವ ವೈದ್ಯಕೀಯ ಮೊತ್ತಕ್ಕಿಂತ ಜಾಸ್ತಿ ಸುಳ್ಳು ವೈದ್ಯಕೀಯ ಬಿಲ್ಲುಗಳನ್ನು ಸೃಷ್ಟಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಯಾವುದೇ ಶಾಶ್ವತ ಅಂಗನ್ಯೂನತೆ ಆಗದಿದ್ದರೂ ಸಹ ಹೆಚ್ಚಿನ ಪರಿಹಾರ ಪಡೆಯಲು ಖಾಸಗಿಯವರಿಂದ ದಾಖಲಾತಿಗಳನ್ನು ಸೃಷ್ಟಿ ಮಾಡಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಅರ್ಜಿಯಲ್ಲಿ ಕೇಳಿರುವಷ್ಟು ಪರಿಹಾರ ಪಡೆಯಲು ಯೋಗ್ಯನಾಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಈಗ ಯಾವುದೇ ಕೆಲಸ ಮಾಡುತ್ತಿಲ್ಲ. ನನ್ನ ವಯಸ್ಸನ್ನು ತೋರಿಸಲು ಆಧಾರಕಾರ್ಡನ್ನು ಹಾಜರುಪಡಿಸಿರುತ್ತೇನೆ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.